ಸಮರ್ಥ ಅಭಿವ್ಯಕ್ತಿ' ಎನ್ನುವುದಕ್ಕೆ ಮಾದರಿಯಾದವರಿದ್ದಾರೆ. ಹಳೆಯ ತಲೆಮಾರಿನ ಕತೆಗಾರರು ಅಳವಡಿಸಿಕೊಂಡಿದ್ದ ನಿರೂಪಣಾವಿಧಾನ, ನೀತಿನಿಯಮಗಳೇ ಬೇರೆ. ಈಗಿನವರದೇ ಬೇರೆ. ಆದರೆ ಅದೆಷ್ಟೋ ಹಿರಿಯ ಚೇತನಗಳು ಆಗಲೂ ಸಲ್ಲುತ್ತಿದ್ದರು, ಪ್ರಸ್ತುತಕ್ಕೂ ಸಲ್ಲುತ್ತಿದ್ದಾರೆ ಅನ್ನುವುದರಲ್ಲಿ ಎರಡು ಮಾತಿಲ್ಲ. ಕಾಲಾನುಕಾಲಕ್ಕೆ ಕತೆಗಳ ಭಾಷೆ, ತಂತ್ರ, ನಿರೂಪಣಾವಿಧಾನಗಳಲ್ಲಿ ಬದಲಾವಣೆಗಳಾಗಿದ್ದರೆ ಅದು ಹರಿವ ನೀರಿನ ಗತಿಯಂತೆ ಸಹಜ ಬದಲಾವಣೆ. ಓದಿದ ತಕ್ಷಣ ಹೊಸ ವಿಚಾರಧಾರೆ ಎನ್ನಿಸುವ, ಓದುಗರನ್ನು ಚಕಿತಗೊಳಿಸುವ, ಹಲವಾರು ಕತೆಗಳು ಈ ತಲೆಮಾರಿನ ಲೇಖಕರಿಂದ ಓದುಗರಿಗೆ ಲಭ್ಯವಾಗಿ ಜನಮೆಚ್ಚುಗೆಗಳಿಸಿವೆ. ತಾಜಾ ದನಿಗಳು ಕನ್ನಡ ಕಥಾಲೋಕದಲ್ಲಿ ಮಿನುಗುತ್ತಿವೆ. ತಂತ್ರ ಮತ್ತು ನಿರೂಪಣಾವಿಧಾನದ ಬಗ್ಗೆ ಪ್ರತಿ ಲೇಖಕರೂ ತಮ್ಮದೇ ಶೈಲಿಯನ್ನು ರೂಢಿಸಿಕೊಂಡು ಮುಂದುವರಿಸಿಕೊಂಡು ಬಂದಿರುವುದರಿಂದ ಹೊಸದನ್ನು ಅಳವಡಿಸಿಕೊಳ್ಳುವುದು ಕಷ್ಟಸಾಧ್ಯವಾದರೂ ಅಸಾಧ್ಯವೇನಲ್ಲ. ಕತೆಯ ನಿರೂಪಣೆಗೆ ಅಗತ್ಯವೆನಿಸಿದಲ್ಲಿ ಬದಲಾವಣೆ ಅನಿವಾರ್ಯ ಕೂಡಾ. ಕತೆಯ ವಸ್ತು ಹೆಚ್ಚೂಕಮ್ಮಿ ಒಂದೇ ಆಗಿದ್ದರೂ ನಿರೂಪಣಾವಿಧಾನದ ಪ್ರತ್ಯೇಕತೆಯಿಂದ ಓದುಗರ ಮನದಲ್ಲಿ ವಿಶೇಷ ಸ್ಥಾನ ಪಡೆಯುವ ಲೇಖಕರಿದ್ದಾರೆ. ಅದು ಅವರ ಬರವಣಿಗೆಯ ಕುಸುರಿಗಾರಿಕೆಯ ಫಲಶ್ರುತಿ. ಕಥಾವಸ್ತುಗಳ ಕುರಿತು ಆ ಕಾಲದ್ದು, ಈ ಕಾಲದ್ದು ಎನ್ನುವ ಭೇದಭಾವಕ್ಕಿಂತಾ ನಿರ್ವಹಣಾಕೌಶಲದ ರೀತಿ ಹೆಚ್ಚು ಪ್ರಾಮುಖ್ಯ ವಹಿಸುತ್ತದೆ ಎಂದು ನನ್ನ ಭಾವನೆ. ನನ್ನ ಕತೆಗಳ ಕುರಿತಾಗಿ ಇನ್ನೊಂದಷ್ಟನ್ನು ಹೇಳಬೇಕೆಂದರೆ ನನ್ನನ್ನು ಪ್ರಭಾವಿತಗೊಳಿಸುವ, ವಿಚಲಿತಗೊಳಿಸುವ, ಬರೆಸಿಕೊಳ್ಳಲೆಳಸುವ ಕತೆಗಳನ್ನು ಸಾಧ್ಯವಾದಷ್ಟು ಬೇಗ ಬರೆದು ಮುಗಿಸಿ ನಿರುಮ್ಮಳವಾಗುವುದು ನನ್ನ ರೀತಿ. ಹೀಗಾಗಿ ಬರೆಯಲಾಗದ ಕತೆಯೋ, ಮುಟ್ಟಲಾಗದ ಅನುಭವವೋ ನನ್ನ ನಿಘಂಟಿನಲ್ಲಿಲ್ಲ. ಮುಟ್ಟಲಾಗದ ಅನುಭವಕ್ಕೆ ಬಲವಂತವಾಗಿ ನಾನು ಕೈಚಾಚಲು ಹೋಗುವುದಿಲ್ಲ. ಕತೆಯೊಂದನ್ನು ಬರೆಯುವಾಗಿನ ಅದುಮಿ ಹಿಡಿದಂತಾ ಒತ್ತಡದ ಮನೋಸ್ಥಿತಿ, ಬರೆದು ಮುಗಿಸಿದ ನಂತರದ ಖಾಲಿಖಾಲಿಯಾದಂತಾ ಅನುಭವ ನನ್ನ ಜೀವನದ ಅವಿಭಾಜ್ಯ ಅಂಗವಾಗಿದೆ. ಅನ್ಯರ ಅಥವಾ ಸ್ವಂತದ ದುಃಖ–ದುಮ್ಮಾನಗಳು, ನೋವು–ಸಂಕಟಗಳು ಕಥೆಯಾಗಿಸಿಕೊಳ್ಳಬೇಕೆಂಬ ತವಕದಿಂದಷ್ಟೇ ನನ್ನನ್ನು ತೀವ್ರವಾಗಿ ಕಾಡುತ್ತವೆಯೇ ಎನ್ನುವ ಸಂಶಯ, ದಿಗಿಲು ಕೂಡಾ ನನ್ನನ್ನು ವಿಚಲಿತಗೊಳಿಸಿದ್ದಿದೆ. ಇದೊಂದು ದೌರ್ಬಲ್ಯವಿರಬಹುದೆನಿಸಿ ಬೆಚ್ಚುವಂತಾಗಿದ್ದಿದೆ. ನನ್ನ ಕತೆಗಳು ನನಗೆ ಅನೇಕ ಅಭಿಮಾನಿಗಳನ್ನು ಸಂಪಾದಿಸಿಕೊಟ್ಟಿವೆ. ನನ್ನ ಕತೆಯೊಂದನ್ನು ಓದಿ 'ಆತ್ಮಹತ್ಯೆಯ ಯೋಚನೆ ಕೈಬಿಟ್ಟು ಬದುಕನ್ನು ಎದುರಿಸಲು ನಿರ್ಧರಿಸಿದ್ದೇನೆ' ಎನ್ನುವ ವೈದ್ಯರೊಬ್ಬರ ಪತ್ರವೊಂದನ್ನು ಉದಾಹರಿಸುತ್ತಾ ಇಂತಾ ಹಲವಾರು ಪತ್ರಗಳು ನನ್ನ ಬರವಣಿಗೆಗೆ ಮೆಚ್ಚುಗೆಯ ಪದಕಗಳಾಗಿ ದೊರೆತಿವೆ. ಇವು ನನ್ನ ಕತೆಗಳಿಗೆ ದೊರಕಿದ ಅತ್ಯುತ್ತಮ ವ್ಯಾಖ್ಯಾನ ಎನ್ನುವ ನನ್ನ ಭಾವನೆಯನ್ನು ವಿನಮ್ರವಾಗಿ ಸ್ಪಷ್ಟಪಡಿಸುತ್ತಿದ್ದೇನೆ. ಈ ಘಟ್ಟದಲ್ಲಿ ಒಮ್ಮೆ ಹಿಂತಿರುಗಿ ನೋಡಿದರೆ ನಾನು ಈ ಕತೆಗಳನ್ನು ಬರೆದಿಲ್ಲ, ಕತೆಗಳು ನನ್ನಿಂದ ಬರೆಸಿಕೊಂಡುವು ಎನ್ನುವುದರ ಜೊತೆಜೊತೆಗೆ ಪತ್ರಿಕೆಗಳು ನನ್ನನ್ನು ಇಲ್ಲಿಯವರೆಗೆ ತಂದು ನಿಲ್ಲಿಸಿವೆ ಎನ್ನುವ ಕೃತಜ್ಞತಾಭಾವ ಕೂಡಾ ಮನಸ್ಸನ್ನು ಆವರಿಸಿಕೊಳ್ಳುತ್ತದೆ. 'ಕತ್ತಲಿನಿಂದ ಬೆಳಕಿನೆಡೆಗೆ' ತಂದು ಜನರ ಕಣ್ಣಿಗೆ ನನ್ನ ಬರಹಗಳನ್ನು ತಲುಪಿಸಿದ ಪತ್ರಿಕೆಗಳಿಗೆ ನಾನು ಸದಾ ಆಭಾರಿ.